ಪಂದ್ಯದ ಪವರ್‌ಪ್ಲೇನಲ್ಲಿ ಎಡಗೈ ಬ್ಯಾಟ್ಸ್‌ಮನ್ ಸನತ್ ಜಯಸೂರ್ಯ ಮತ್ತು ರೊಮೇಶ್ ಕಲುವಿತರಣಾ ಜೋಡಿಯ ಅಬ್ಬರದ ಆಟವನ್ನು ಮರೆಯಲಾದರೂ ಹೇಗೆ ಸಾಧ್ಯ? ಕೇವಲ 15 ಓವರ್‌ಗಳಲ್ಲಿ 100ಕ್ಕೂ ಹೆಚ್ಚು ರನ್‌ಗಳನ್ನು ಸೂರೆಗೊಳ್ಳುವ ಕಲೆ ಪ್ರಚಲಿತವಾಗಿದ್ದೇ ಆಗಿನಿಂದ. ಒಂದು, ಎರಡು ರನ್‌ಗಳನ್ನು ಗಳಿಸುತ್ತ ಮೆಲ್ಲಗೆ ಅರ್ಧಶತಕ, ಶತಕ ಬಾರಿಸಿ ಮಧ್ಯಮ ಕ್ರಮಾಂಕವನ್ನು ಗಟ್ಟಿಗೊಳಿಸುತ್ತಿದ್ದ ಅರ್ಜುನ ರಣತುಂಗಾ, ಕಲಾತ್ಮಕ ಬ್ಯಾಟಿಂಗ್ ಮಾಂತ್ರಿಕ ಅರವಿಂದ ಡಿಸಿಲ್ವಾ, ರೋಶನ್ ಮಹಾನಾಮ, ಆಫ್‌ಸ್ಪಿನ್ ಚತುರ ಮುತ್ತಯ್ಯ ಮುರಳೀಧರನ್, ಎಡಗೈ ಮಧ್ಯಮವೇಗಿ ಚಮಿಂಡಾ ವಾಸ್ ಅವರ ರಿವರ್ಸ್ ಸ್ವಿಂಗ್ ಸೊಬಗು ಮೇಳೈಸಿದ್ದವು. ಅದರಿಂದಾಗಿಯೇ ಆ ವರ್ಷ ತಂಡಕ್ಕೆ ವಿಶ್ವಕಪ್ ಗೆಲ್ಲಲು ಸಾಧ್ಯವಾಯಿತು. ಅದೇ ಪ್ರೇರಣೆಯಿಂದಾಗಿ ಮಹೇಲ ಜಯವರ್ಧನೆ, ದಿಲ್ಶಾನ್ ತಿಲಕರತ್ನೆ, ಅಜಂತಾ ಮೆಂಡಿಸ್, ಲಸಿತ್ ಮಾಲಿಂಗ್ ಅವರೂ ಬೆಳೆದರು. ದೇಶದ ಕ್ರಿಕೆಟ್ ಅನ್ನು ಬೆಳೆಸಿದರು. ಆದರೆ ಈ ಬಾರಿಯ ಏಷ್ಯಾ ಕಪ್ ಟೂರ್ನಿಯತ್ತ ಒಮ್ಮೆ ಕಣ್ಣು ಹಾಯಿಸಿದರೆ ದ್ವೀಪರಾಷ್ಟ್ರದ ಕ್ರಿಕೆಟ್ ನಿರಾಸೆಯ ಅಲೆಗಳಲ್ಲಿ ಕೊಚ್ಚಿಹೋಗಿರುವುದು ಕಾಣಿಸುತ್ತದೆ. ಏಷ್ಯಾಮಟ್ಟದಲ್ಲಿಯೇ ತನ್ನ ವರ್ಚಸ್ಸು ಉಳಿಸಿಕೊಳ್ಳಲು ಪರದಾಡುತ್ತಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅಂಬೆಗಾಲಿಡುತ್ತಿರುವ ಅಫ್ಘಾನಿಸ್ತಾನ್ ತಂಡದ ಎದುರು 90 ರನ್‌ಗಳಿಂದ ಹೀನಾಯ ಸೋಲು ಅನುಭವಿಸಿದ ಶ್ರೀಲಂಕಾ ಟೂರ್ನಿಯಿಂದಲೇ ಹೊರಬಿದ್ದಿತು. ಮೊದಲ ಪಂದ್ಯದಲ್ಲಿ ಬಾಂಗ್ಲಾ ಎದುರೂ ಸೋತಿತ್ತು. ಇದರಿಂದಾಗಿ 'ಏಷ್ಯಾದ ದೊಡ್ಡ ಫ್ಲಾಫ್ ಟೀಮ್' ಎಂಬ ಟೀಕೆಗೂ ಗುರಿಯಾಯಿತು. 2017ರ ಆರಂಭದಿಂದ ಇಲ್ಲಿಯವರೆಗೆ ಲಂಕಾ ತಂಡವು ಆಡಿದ 40 ಏಕದಿನ ಪಂದ್ಯಗಳಲ್ಲಿ 30ರಲ್ಲಿ ಸೋತಿದೆ. ತನ್ನ ತವರಿನ ಅಂಗಳದಲ್ಲಿಯೂ ಸರಣಿಗಳನ್ನು ಸೋತಿದೆ. ನಾಯಕ ಏಂಜೆಲೊ ಮ್ಯಾಥ್ಯೂಸ್, ಕುಶಾಲ ಮೆಂಡಿಸ್ ಅವರು ಈಗ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯಲ್ಲಿ ಮಿತಿ ಮೀರಿದ ರಾಜಕೀಯ ಹಸ್ತಕ್ಷೇಪ, ಉದ್ದೀಪನ ಮದ್ದು ಸೇವನೆ ಪ್ರಕರಣ ಮತ್ತು ಬೆಟ್ಟಿಂಗ್ ಜಾಲದೊಂದಿಗೆ ಆಟಗಾರರ ಸಂಪರ್ಕದ ಆರೋಪಗಳು ದೊಡ್ಡ ಸುದ್ದಿಯಾಗುತ್ತಿವೆ. ಇಂತಹ ಬೆಳವಣಿಗೆಗಳು ಆ ದೇಶದ ದಿಗ್ಗಜ ಕ್ರಿಕೆಟಿಗರು ಆಡಳಿತದಿಂದ ದೂರ ಉಳಿಯುವಂತೆ ಮಾಡಿವೆ. ಇದರಿಂದಾಗಿ ಯುವ ಕ್ರಿಕೆಟ್ ಆಟಗಾರರಿಗೆ ಉತ್ತೇಜನ ಸಿಗುತ್ತಿಲ್ಲ. ಪ್ರತಿಭೆಗಳನ್ನು ಹುಡುಕಿ ಅವಕಾಶ ನೀಡುವ ಕಾರ್ಯವೂ ಸೂಕ್ತವಾಗಿ ನಡೆಯುತ್ತಿಲ್ಲ.





ಮುಜೀಬುರ್ ರೆಹಮಾನ್

'ನಮ್ಮ ದೇಶದ ಕ್ರಿಕೆಟ್‌ನಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಮಿತಿ ಮೀರಿದೆ' ಎಂದು ಕಳೆದ ಏಪ್ರಿಲ್‌ನಲ್ಲಿ ಮುತ್ತಯ್ಯ ಮುರಳೀಧರನ್ ಕಿಡಿಕಾರಿದ್ದರು. ಇದಲ್ಲದೇ ಕೆಲವು ವರ್ಷಗಳ ಹಿಂದೆ ತಾರಾ ವರ್ಚಸ್ಸಿನ ಕ್ರಿಕೆಟಿಗರು ನಿವೃತ್ತರಾದ ನಂತರ ಅವರ ಸ್ಥಾನ ತುಂಬುವ ಸೂಕ್ತ ಆಟಗಾರರಿಗೆ ಹೆಚ್ಚು ಅವಕಾಶ ಸಿಗಲಿಲ್ಲ. ತಂಡದಲ್ಲಿ ಪದೇ ಪದೇ ಬದಲಾವಣೆ ಮಾಡಿದ್ದರಿಂದ ಯುವ ಆಟಗಾರರಿಗೆ ಅನುಭವದ ಕೊರತೆ ಕಾಡಿತು. ತಂಡದೊಳಗೆ ಆಂತರಿಕ ಹೊಂದಾಣಿಕೆಯು ತಪ್ಪಿತು. 'ಬೆಂಚ್ ಸ್ಟ್ರೆಂಥ್' ಬಲಗೊಳಿಸುವ ಯೋಜನೆಗಳೂ ಗಂಭೀರವಾಗಿ ಜಾರಿಯಾಗಲಿಲ್ಲ. ಕೋಚ್‌ಗಳ ನೇಮಕದಲ್ಲಿಯೂ ಶಿಸ್ತು ಕಂಡುಬರಲಿಲ್ಲ. ವಿದೇಶಿ ಕೋಚ್‌ಗಳ ನೇಮಕಕ್ಕೆ ತೀವ್ರ ವಿರೋಧ ಇಲ್ಲಿದೆ. ಸ್ಥಳೀಯ ಕ್ರಿಕೆಟ್ ಟೂರ್ನಿಗಳ ಕೊರತೆಯೂ ಇದೆ. ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್ ದೇಶಗಳ ಮಾದರಿಯ ದೇಶಿ ಕ್ರಿಕೆಟ್ ವೇಳಾಪಟ್ಟಿ ಲಂಕಾದಲ್ಲಿ ಇಲ್ಲ. ಅದರಿಂದಾಗಿ ಯುವ ಪ್ರತಿಭೆಗಳಿಗೆ ವೇದಿಕೆ ಸಿಗುತ್ತಿಲ್ಲ.

ಸದ್ಯ ತಂಡದಲ್ಲಿರುವ ಅನುಭವಿ ಆಟಗಾರ ರಂಗನಾ ಹೆರಾತ್ ತಮ್ಮ ವೃತ್ತಿಜೀವನದ ಕೊನೆಯ ಹಂತದಲ್ಲಿದ್ದಾರೆ. ನಾಯಕ ಏಂಜೆಲೊ ಮ್ಯಾಥ್ಯೂಸ್ ಅವರು ತಂಡವನ್ನು ಸರಿದೂಗಿಸಿಕೊಂಡು ಹೋಗಲು ಒದ್ದಾಡುತ್ತಿದ್ದಾರೆ. ಮುಂದಿನ ತಿಂಗಳು ಇಂಗ್ಲೆಂಡ್ ತಂಡವು ಸರಣಿ ಆಡಲು ಲಂಕೆಗೆ ಬರಲಿದೆ. ಮುಂದಿನ ವರ್ಷ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದೆ. ಅದರಿಂದಾಗಿ ಏಷ್ಯಾದ ಪ್ರಮುಖ ತಂಡಗಳಲ್ಲಿ ಒಂದಾಗಿರುವ ಲಂಕಾ ಬಳಗವನ್ನು ಮತ್ತೆ ಯಶಸ್ಸಿನ ಹಳಿಗೆ ಕರೆತರುವ ತುರ್ತು ಕಾರ್ಯವಾಗಬೇಕಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಮೂರು ವರ್ಷಗಳಲ್ಲಿಯೇ ಉತ್ತಮವಾಗಿ ಆಡುತ್ತಿರುವ ಅಫ್ಘಾನಿಸ್ತಾನ್ ತಂಡವು ಲಂಕೆಗೆ ಮಾದರಿಯಾಗಬೇಕು. ಭಯೋತ್ಪಾದನೆ, ಯುದ್ಧದ ಬೆಂಕಿಯ ಬೂದಿಯಿಂದ ಎದ್ದು ಬಂದ ಅಫ್ಘಾನಿಸ್ತಾನ್ ಇವತ್ತು ಲಂಕಾ, ಪಾಕಿಸ್ತಾನ ಮತ್ತು ಭಾರತ ತಂಡಗಳಿಗೇ ಸೆಡ್ಡು ಹೊಡೆಯುವಷ್ಟು ಎತ್ತರಕ್ಕೆ ಬೆಳೆದಿದೆ. ತಂಡದ ರಶೀದ್ ಖಾನ್ ಆಲ್‌ರೌಂಡರ್ ಆಗಿ ಬೆಳೆಯುತ್ತಿದ್ದಾರೆ.

ಅಫ್ಘಾನ್ ತಂಡವು ತನಗಿಂತಲೂ ಬಲಶಾಲಿ ಮತ್ತು ಅನುಭವಿ ತಂಡಗಳಾದ ಲಂಕಾ ಮತ್ತು ಬಾಂಗ್ಲಾ ದೇಶಗಳನ್ನು ಮಣಿಸಿದೆ. ತನ್ನ ದೇಶದಲ್ಲಿ ಯಾವುದೇ ಮೂಲ ಸೌಲಭ್ಯವನ್ನು ಅಫ್ಘಾನ್ ಹೊಂದಿಲ್ಲ. ಭಾರತದ ನೆರವು ಪಡೆದು ತಂಡವು ಬೆಳೆಯುತ್ತಿರುವುದು ಇಲ್ಲಿ ಗಮನಾರ್ಹ. ಮುಜೀಬ್ ಉರ್ ರೆಹಮಾನ್, ಜದ್ರಾನ್, ಅಸ್ಗರ್ ಸ್ಟಾನಿಕ್ ಜಾಯ್, ಮೊಹಮ್ಮದ್ ಶಹಜಾದ್ ಅವರು ಈಗ ಅನುಭವಿ ಆಟಗಾರರಂತೆಯೇ ಆಡುತ್ತಿದ್ದಾರೆ. ಹಾಂಕಾಂಗ್ ತಂಡವೂ ಭಾರತದಂತಹ ಬಲಿಷ್ಠ ತಂಡಕ್ಕೆ ಕಠಿಣ ಸವಾಲು ಒಡ್ಡಬಲ್ಲ ಸಾಮರ್ಥ್ಯ ಬೆಳೆಸಿಕೊಂಡಿದೆ.

ಆದರೆ ಒಂದು ಕಾಲದ ದಿಗ್ಗಜ ತಂಡ ಪಾಕಿಸ್ತಾನ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡುತ್ತಿದೆ. ವೆಸ್ಟ್ ಇಂಡೀಸ್‌ನಲ್ಲಿ ಈಗಲೂ ಉತ್ತಮ ಆಟಗಾರರು ಇದ್ದಾರೆ. ಆದರೆ ದಶಕಗಳ ಹಿಂದಿನ ಸಾರ್ವಭೌಮ ಪಟ್ಟ ಕುಸಿದಿದೆ. ದಶಕಗಳ ಹಿಂದೆ ಉತ್ತಮ ಆಟಗಾರರನ್ನು ಹೊಂದಿದ್ದ ಜಿಂಬಾಬ್ವೆ ತಂಡವು ಈಗ ತಳ ಕಂಡಿದೆ. 1996ರ ವಿಶ್ವಕಪ್ ಮತ್ತು ನಂತರದ ವರ್ಷಗಳಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಕೆನ್ಯಾ ತಂಡವೂ ಈಗ ಮತ್ತೆ ಲಯಕ್ಕೆ ಮರಳುವಂತೆ ಕಾಣುತ್ತಿಲ್ಲ. ಅದೇ ಹಾದಿಯಲ್ಲಿ ಶ್ರೀಲಂಕಾ ಕೂಡ ಇದೆ. ಆಧುನಿಕ ಕ್ರಿಕೆಟ್‌ನ ಸ್ಪರ್ಧಾತ್ಮಕ ಸವಾಲುಗಳನ್ನು ಎದುರಿಸುವ ವ್ಯವಸ್ಥೆ ರೂಪುಗೊಳ್ಳದಿದ್ದರೆ ಆಗುವ ಅನಾಹುತಗಳ ಉದಾಹರಣೆಗಳು ಇವು. ಈ ಎಲ್ಲ ದುರಂತ ಕಥೆಗಳ ಹಿಂದೆ ಆಯಾ ದೇಶಗಳ ಕ್ರಿಕೆಟ್ ಆಡಳಿತ ಮಂಡಳಿಗಳ ಆಂತರಿಕ ಕಲಹ, ಬಿಕ್ಕಟ್ಟು, ಸ್ವಜನ ಪಕ್ಷಪಾತ, ಸರ್ಕಾರಗಳ ಅನಗತ್ಯ ಹಸ್ತಕ್ಷೇಪ, ರಾಜಕೀಯ ಹಸ್ತಕ್ಷೇಪ, ಭ್ರಷ್ಟಾಚಾರಗಳೇ ಕಾರಣವಾಗಿವೆ.

ಲಂಕಾ ತಂಡಕ್ಕೆ ಇದು ಆತ್ಮಾವಲೋಕನದ ಸಮಯ. ಬೇರುಮಟ್ಟದಿಂದ ಅಭಿವೃದ್ಧಿಯ ಕಾರ್ಯ ಆರಂಭವಾದರೆ ಇನ್ನೊಂದೆರಡು ವರ್ಷದಲ್ಲಿ ಲಂಕಾ ಕ್ರಿಕೆಟ್‌ನಲ್ಲಿ ಹೊಸ 'ಸೂರ್ಯ' ಉದಯವಾಗಬಹುದು.